# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1065

**ಮಾನ್ಯ ಸದಸ್ಯರ ಹೆಸರು** : ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

**ಉತ್ತರಿಸಬೇಕಾದ ದಿನಾಂಕ** : 25.07.2024

**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಪ್ರವಾಸೋದ್ಯಮ ಉತ್ತೇಜನ ನೀಡುವ ಸಲುವಾಗಿ ಸರ್ಕಾರ ಕೈಗೊಂಡ ಕ್ರಮವೇನು; | ಪ್ರವಾಸೋದ್ಯಮ ಇಲಾಖೆಯಿಂದ ಬೀದರ್ ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಕೈಗೆತ್ತಿಕೊಂಡಿರುವ ಮೂಲಭೂತ ಸೌಕರ್ಯ ಹಾಗೂ ಕೈಗೊಂಡಿರುವ ಇತರೆ ಅಭಿವೃದ್ಧಿ ಕಾಮಗಾರಿಗಳ ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ.<br><br>ಅಲ್ಲದೇ, ಜಿಲ್ಲಾಡಳಿತ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಮೂಲಕ ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಉತ್ತೇಜನ ನೀಡುವ ಸಂಬಂಧ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1. ಬೀದರ್ ಜಿಲ್ಲೆಯಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಪ್ರವಾಸಿ ತಾಣಗಳ ಹತ್ತಿರ ಹೋರ್ಡಿಂಗ್ಸ್‌ಗಳನ್ನು ಅಳವಡಿಸಲಾಗಿದೆ.<br>2. ಪ್ರವಾಸೋದ್ಯಮ ಉತ್ತೇಜನಕ್ಕೆ 2023ರಲ್ಲಿ ಬೀದರ್ ಉತ್ಸವ ಕೈಗೊಳ್ಳಲಾಗಿರುತ್ತದೆ.<br>3. 2023-24ನೇ ಸಾಲಿನಲ್ಲಿ ಜಿಲ್ಲೆಯ ಬಸವಕಲ್ಯಾಣದಲ್ಲಿ ಬಸವ ಉತ್ಸವ ನಡೆಸಲಾಗಿರುತ್ತದೆ.<br>4. ಕರ್ನಾಟಕ ಪ್ರವಾಸೋದ್ಯಮವನ್ನು ಜಿಲ್ಲಾ ಮಟ್ಟದಲ್ಲಿ ಉತ್ತೇಜಿಸಲು ಹಾಗೂ ಪ್ರಚಾರಪಡಿಸಲು 2022-23ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ರೂ.20.00 ಲಕ್ಷಗಳನ್ನು ಮತ್ತು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳ ಅನುಷ್ಠಾನ ಸಂಬಂಧ ವಿವಿಧ ಸಂಸ್ಥೆ/ಏಜೆನ್ಸಿಗಳಿಂದ Project Plan and DPR ಮುಂತಾದ ಸೇವೆ ಪಡೆಯಲು ರೂ.10.00 ಲಕ್ಷಗಳನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ಬಿಡುಗಡೆ ಮಾಡಲಾಗಿರುತ್ತದೆ.<br>5. 2020-26ರ ಪ್ರವಾಸೋದ್ಯಮ ನೀತಿಯಲ್ಲಿ ಬೀದರ್ ಹಾಗೂ ಬಸವಕಲ್ಯಾಣ ತಾಣಗಳನ್ನು ಆದ್ಯತಾ ಪ್ರವಾಸಿ ತಾಣಗಳನ್ನಾಗಿ ಗುರುತಿಸಲಾಗಿರುತ್ತದೆ. ಹೀಗಾಗಿ ಈ ತಾಲ್ಲೂಕಿನ ಪ್ರವಾಸೋದ್ಯಮ ಕ್ಷೇತ್ರ ಯೋಜನೆಗಳಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಖಾಸಗಿ ಹೂಡಿಕೆದಾರರಿಗೆ ನಿಯಮಾನುಸಾರ ಸಹಾಯಧನ, ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಇದಲ್ಲದೇ, ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿನ ಪ್ರಿಮೀಯಂ ಹೋಟೆಲ್ ಯೋಜನೆಗಳಿಗೆ ಶೇ.5% ರಷ್ಟು ಹೆಚ್ಚುವರಿ ಸಹಾಯಧನವನ್ನು ನೀಡಲು ಸಹ ಅವಕಾಶ ಕಲ್ಪಿಸಲಾಗಿದೆ. |

--2

| | | |
|---|---|---|
| ಆ) | ಪ್ರವಾಸೋದ್ಯಮ ಉತ್ತೇಜನಕ್ಕೆ ಸದರಿ ಜಿಲ್ಲೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ; | ಬಂದಿದೆ. |
| ಇ) | ಬಂದಿದ್ದಲ್ಲಿ, ಮಾಹಿತಿ ನೀಡುವುದು? | 2023-24ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಪ್ರವಾಸೋದ್ಯಮ ಉತ್ತೇಜನ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತದೆ.<br><br>1. ಬೀದರ್ ಜಿಲ್ಲೆಯ ಕಮಲನಗರ ತಾಲ್ಲೂಕಿನ ಕಮಲನಗರ ಸಮೀಪದ ಶ್ರೀ ಕ್ಷೇತ್ರ ಸಂಗಮೇಶ್ವರ ಐತಿಹಾಸಿಕ ಮಂದಿರಕ್ಕೆ ರಸ್ತೆ ನಿರ್ಮಾಣ ಮಾಡುವುದು ಹಾಗೂ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವುದು.<br>2. ಬೀದರ್ ಕಾರಂಜಾ ಜಲಾಶಯದ (ಅಣೆಕಟ್ಟು) ಬಳಿ ವೃಂದಾವನದ ಮಾದರಿಯಲ್ಲಿ ಉದ್ಯಾನವನದ ನಿರ್ಮಾಣ ಮಾಡುವುದರ ಜೊತೆಗೆ ಇತರ ಐತಿಹಾಸಿಕ ಪ್ರವಾಸಿ ತಾಣಗಳ ಅಭಿವೃದ್ಧಿ.<br>3. ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಬೀದರ್ ಜಿಲ್ಲೆ, ಬೀದರ್ ಇವರ ಪತ್ರ ದಿನಾಂಕ: 11.10.2023ರಂದು ಕೇಂದ್ರ ಪುರಸ್ಕೃತ ಪ್ರಸಾದ್ 2.0 ಯೋಜನೆಯಡಿ ಬೀದರ್ ಜಿಲ್ಲೆಯ ಶ್ರೀ ಪಾಪನಾಶ ದೇವಸ್ಥಾನವನ್ನು ಅಭಿವೃದ್ಧಿಪಡಿಸುವ ಸಂಬಂಧ ಪ್ರಸ್ತಾವನೆ ಸಲ್ಲಿಸಿರುತ್ತಾರೆ.<br><br>ಮೇಲ್ಕಂಡ ಪ್ರಸ್ತಾವನೆಗಳ ಪೈಕಿ, ಕ್ರ.ಸಂ. 1 ಮತ್ತು 2 ರಲ್ಲಿರುವ ನೂತನ ಕಾಮಗಾರಿಗಳನ್ನು ಅನುದಾನ ಕೊರತೆಯಿಂದ ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ.<br><br>ಮುಂದುವರೆದು, ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಪ್ರಸಾದ್ 2.0 ಯೋಜನೆಯಡಿ ಬೀದರ್ ಜಿಲ್ಲೆಯ ಶ್ರೀ ಪಾಪನಾಶ ದೇವಸ್ಥಾನವನ್ನು ರೂ.22.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ತಾತ್ವಿಕ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಗೆ ಸಂಬಂಧಿಸಿದಂತೆ ವಿಸ್ತೃತ ಯೋಜನಾ ವರದಿ ತಯಾರಿಸಲು ಸಮಾಲೋಚನಾ ಸಂಸ್ಥೆಯನ್ನು ನೇಮಕ ಮಾಡಲಾಗಿದ್ದು, DPR ತಯಾರಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. |

**TOR 207 TDV 2024**

(ಎಚ್.ಕೆ.ಪಾಟೀಲ್)
ಕಾನೂನು, ನ್ಯಾಯ, ಮಾನವ ಹಕ್ಕುಗಳು
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1000 (1065)ಕ್ಕೆ ಅನುಬಂಧ**

**ಪ್ರವಾಸೋದ್ಯಮ ಇಲಾಖೆಯಿಂದ ಬೀದರ್ ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಕೈಗೆತ್ತಿಕೊಂಡಿರುವ ಮೂಲಭೂತ ಸೌಕರ್ಯ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳ ಕೈಗೊಂಡಿರುವ ವಿವರ**

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 1 | 2 | 3 | 4 | 5 | 6 |
| | **ಬೀದರ್ ಜಿಲ್ಲೆ** | | | | |
| | **ಬೀದರ್ ತಾಲ್ಲೂಕು** | | | | |
| 1 | ಬೀದರ್ ಜಿಲ್ಲೆಯ ಚೌಕಂಡಿ ಮತ್ತು ಅಸ್ತೂರ್ ಟೂಮ್ಸ್ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ. (ಕೇಂದ್ರ ಯೋಜನೆ) | 318.27 | ಎ.ಎಸ್.ಐ ಧಾರವಾಡ/ ಜಿಲ್ಲಾಧಿಕಾರಿಗಳು ಬೀದರ್ | 100.00 | ಕಾಮಗಾರಿ ಪ್ರಗತಿಯಲ್ಲಿದೆ |
| 2 | ಬೀದರ್ ಕೋಟೆ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿ | 252.43 | ಎ.ಎಸ್.ಐ ಧಾರವಾಡ | 252.43 | ಕಾಮಗಾರಿ ಪ್ರಗತಿಯಲ್ಲಿದೆ |
| 3 | ಬೀದರ್ ತಾಲ್ಲೂಕಿನ ರೇಕುಳಗಿ ಗ್ರಾಮದ ಶ್ರೀ ಶಂಭುಲಿಂಗ ದೇವಸ್ಥಾನದ ಬಳಿ ಡಾರ್ಮಿಟರಿ, ಸಾರ್ವಜನಿಕ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಪಾರ್ಕಿಂಗ್ ಸೌಲಭ್ಯ, ಪಾಥ್ ವೇ ನಿರ್ಮಾಣ | 99.30 | ಜಿಲ್ಲಾ ನಿರ್ಮಿತಿ ಕೇಂದ್ರ, ಬೀದರ್ | 70.00 | ಕಾಮಗಾರಿ ಪ್ರಗತಿಯಲ್ಲಿದೆ |
| 4 | ಬೀದರ್ ನಗರದ ಶ್ರೀ ಬಸವ ಸೇವಾ ಪ್ರತಿಷ್ಠಾನ ಶರಣನಗರ ಬಳಿ ಯಾತ್ರಿನಿವಾಸ ನಿರ್ಮಾಣ | 160.88 | ಲೋ.ಇ ಬೀದರ್ | 50.00 | ಕಾಮಗಾರಿ ಪೂರ್ಣಗೊಂಡಿದೆ. |
| 5 | ಬೀದರ ಜಿಲ್ಲೆಯ ಬೀದರ್ ತಾಲ್ಲೂಕಿನ ರೇಕುಳಗಿ ಗ್ರಾಮದಲ್ಲಿರುವ ಬುದ್ಧ ವಚನ ಧಾರ್ಮಿಕ ಅಧ್ಯಯನ ಕೇಂದ್ರ ರೇಕುಳಗಿ ಮೌಂಟ ಹತ್ತಿರ ಯಾತ್ರಿನಿವಾಸ ನಿರ್ಮಾಣ (ಹೆಚ್ಚುವರಿ) | 25.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 10.00 | ಕಾಮಗಾರಿ ಪ್ರಗತಿಯಲ್ಲಿದೆ |
| 6 | ಬೀದರ್ ಜಿಲ್ಲೆಯ ಬೀದರ ತಾಲ್ಲೂಕಿನಲ್ಲಿರುವ ರಾಮಕೃಷ್ಣ ವಿವೇಕಾನಂದ ಆಶ್ರಮದ ಬಳಿ ಯಾತ್ರಿನಿವಾಸ ನಿರ್ಮಾಣ | 54.75 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 50.00 | ಕಾಮಗಾರಿ ಪೂರ್ಣಗೊಂಡಿದೆ. |
| 7 | ಬೀದರ ಜಿಲ್ಲೆ ಬೀದರ್ ಪಟ್ಟಣದ ಹೊರವಲಯದಲ್ಲಿರುವ ನರಸಿಂಹಝರಣ ದೇವಸ್ಥಾನದಲ್ಲಿ ಹತ್ತಿರ ಸ್ನಾನಗೃಹ, ಶೌಚಾಲಯ, ಲ್ಯಾಂಡ್ ಸ್ಕೇಪಿಂಗ್ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ. | 191.00 | ಲೋ.ಇ ಬೀದರ್ | 150.00 | ಕಾಮಗಾರಿ ಪ್ರಗತಿಯಲ್ಲಿದೆ |
| 8 | ಬೀದರ್ ಕೋಟೆಯಲ್ಲಿ ಧ್ವನಿ ಮತ್ತು ಬೆಳಕಿನ ಯೋಜನೆ | 239.99 | ಇನೋವೇಟೀವ್ ಲೈಟಿಂಗ್ ಸಿಸ್ಟಮ್ಸ್ ಕಾರ್ಪ್, ಬೆಂಗಳೂರು | 108.38 | ಕಾಮಗಾರಿ ಪ್ರಾರಂಭಿಸಬೇಕಿದೆ. |

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 1 | 2 | 3 | 4 | 5 | 6 |
| 9 | ಬೀದರ್ ಶಿವನಗರದಲ್ಲಿರುವ ರಾಮಕೃಷ್ಣ-ವಿವೇಕಾನಂದ ಆಶ್ರಮದ ಬಳಿ ಕುಡಿಯು ನೀರು, ಸ್ನಾನಗೃಹ, ಶೌಚಾಲಯಗಳು,ಪಾತ್‌ವೇ ಮುಂತಾದ ಮೂಲಭೂತ ಸೌಕರ್ಯ | 50.00 | ಕೆ.ಟಿ.ಐ.ಎಲ್ | 38.00 | ಕಾಮಗಾರಿ ಪ್ರಗತಿಯಲ್ಲಿದೆ |
| 10 | ಬೀದರ್ ಜಿಲ್ಲೆಯ ಬ್ಲಾಕ್ ಬಕ್ ರೆಸಾರ್ಟ್ ನಲ್ಲಿ ಪರಿಸರ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು. | 199.47 | ಜೆ.ಎಲ್.ಆರ್. | 148.75 | ಕಾಮಗಾರಿ ಪ್ರಗತಿಯಲ್ಲಿದೆ |
| 11 | ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಟಗುಪ್ಪ ತಾಲ್ಲೂಕಿನ ಮುತ್ತಂಗಿ ಗ್ರಾಮದ ಶ್ರೀ ರಾಚೋಟೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ | 15.00 | ಕೆ.ಟಿ.ಐ.ಎಲ್. | 0.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 12 | ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಟಗುಪ್ಪ ತಾಲ್ಲೂಕಿನ ಮುತ್ತಂಗಿ ಗ್ರಾಮದ ಶ್ರೀ ಹುನುಮಾನ್ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ | 10.00 | ಕೆ.ಟಿ.ಐ.ಎಲ್. | 0.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 13 | ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಟಗುಪ್ಪ ತಾಲ್ಲೂಕಿನ ಮುತ್ತಂಗಿ ಗ್ರಾಮದಲ್ಲಿ ಬುದ್ಧ ವಿಹಾರದ ಅಭಿವೃದ್ಧಿ ಕಾಮಗಾರಿ | 10.00 | ಕೆ.ಟಿ.ಐ.ಎಲ್. | 0.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 14 | ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೀದರ್ ತಾಲ್ಲೂಕಿನ ರೇಕುಳಗಿ ಗ್ರಾಮದ ಬುದ್ಧ ವಿಹಾರದ (ಮೌಂಟ್) ಹತ್ತಿರ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ | 25.00 | ಕೆ.ಟಿ.ಐ.ಎಲ್. | 0.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| 15 | ಬೀದರ್ ಜಿಲ್ಲೆ, ಬೀದರ್ ತಾಲ್ಲೂಕಿನ ಬೀದರ್ ನಗರ ವ್ಯಾಪ್ತಿಯಲ್ಲಿನ ಮೈಲೂರ ವಾರ್ಡ್ ನಂ. 28 ರಲ್ಲಿನ ಶ್ರೀ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದ ಪ್ರವಾಸಿ ಮೂಲಭೂತ ಸೌಕರ್ಯ ಹಾಗೂ ಜೀರ್ಣೋದ್ಧಾರ ಕಾಮಗಾರಿ | 50.00 | ಕೆ.ಟಿ.ಐ.ಎಲ್. | 0.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| | **ಬಸವಕಲ್ಯಾಣ ತಾಲ್ಲೂಕು** | | | | |
| 16 | ಬೀದರ್ ಜಿಲ್ಲೆ ಬಸವ ಕಲ್ಯಾಣ ಅನುಭವ ಮಂಟಪ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ | 50.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 40.00 | ಕಾಮಗಾರಿ ಪೂರ್ಣಗೊಂಡಿದೆ. |
| 17 | ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಕೋಟೆ ಸಂರಕ್ಷಣೆ ಅಭಿವೃದ್ಧಿ | 200.00 | ಆಯುಕ್ತರು ಪು.ಸಂ.ಪ ಮತ್ತು ಪ ಇಲಾಖೆ ಮೈಸೂರು | 50.00 | ಕಾಮಗಾರಿ ಪ್ರಗತಿಯಲ್ಲಿದೆ. |

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 1 | 2 | 3 | 4 | 5 | 6 |
| | **ಹುಮ್ನಾಬಾದ್ ತಾಲ್ಲೂಕು** | | | | |
| 18 | ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ಹಳ್ಳಿಖೇಡ್ (ಬಿ) ಗ್ರಾಮದಲ್ಲಿ ಯಾತ್ರಿನಿವಾಸ ನಿರ್ಮಾಣ. | 100.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 85.00 | ಕಾಮಗಾರಿ ಪ್ರಗತಿಯಲ್ಲಿದೆ. |
| 19 | ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ಗೋಡವಾಡಿ ಗ್ರಾಮದಲ್ಲಿ ಯಾತ್ರಿನಿವಾಸ ನಿರ್ಮಾಣ. | 100.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 85.00 | ಕಾಮಗಾರಿ ಪ್ರಗತಿಯಲ್ಲಿದೆ. |
| 20 | ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ದುಬ್ಬಲಗುಂಡಿ ಗ್ರಾಮದಲ್ಲಿ ಯಾತ್ರಿನಿವಾಸ ನಿರ್ಮಾಣ- | 50.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 45.00 | ಕಾಮಗಾರಿ ಪೂರ್ಣಗೊಂಡಿದೆ. |
| 21 | ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ರಾಜೇಶ್ವರ ಗ್ರಾಮದಲ್ಲಿ ಯಾತ್ರಿನಿವಾಸ ನಿರ್ಮಾಣ | 50.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 45.00 | ಕಾಮಗಾರಿ ಪೂರ್ಣಗೊಂಡಿದೆ. |
| 22 | ಬೀದರ್ ಜಿಲ್ಲೆ ಹುಮನಾಬಾದ ಮಾಣಿಕನಗರಲ್ಲಿ ಶ್ರೀ ಮಾಣಿಕಪ್ರಭು ದೇವಸ್ಥಾನದ ಬಳಿ ಯಾತ್ರಿನಿವಾಸ/ ಮೂಲಸೌಲಭ್ಯಗಳ ಅಭಿವೃದ್ಧಿ. | 100.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 85.00 | ಕಾಮಗಾರಿ ಮುಕ್ತಾಯದ ಹಂತದಲ್ಲಿರುತ್ತದೆ. |
| 23 | ಬೀದರ್ ಜಿಲ್ಲೆಯ ಹುಮನಾಬಾದ್ ವಿಧಾನಸಭಾ ಕ್ಷೇತ್ರದ ಬಸವತೀರ್ಥ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. | 27.37 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 10.00 | ಕಾಮಗಾರಿ ಪ್ರಗತಿಯಲ್ಲಿದೆ. |
| 24 | ಬೀದರ್ ಜಿಲ್ಲೆಯ ಹುಮನಾಬಾದ ತಾಲ್ಲೂಕು ರಾಂಪುರ ಗ್ರಾಮದ ಶ್ರೀರಾಮಲಿಂಗೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 50.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 25.00 | ಕಾಮಗಾರಿ ಪ್ರಗತಿಯಲ್ಲಿದೆ. |
| 25 | ಬೀದರ್ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಜಲಸಂಗಿ ಗ್ರಾಮದ ಪುರಾತನ ದೇವಾಲಯಕ್ಕೆ ಕಾಂಪೌಂಡ್ ನಿರ್ಮಾಣ ಹಾಗೂ ಶೌಚಾಲಯ ವ್ಯವಸ್ಥೆ. | 25.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 25.00 | ಕಾಮಗಾರಿ ಪ್ರಗತಿಯಲ್ಲಿದೆ. |
| | **ಭಾಲ್ಕಿ ತಾಲ್ಲೂಕು** | | | | |
| 26 | ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿರುವ ಕೋಟೆ ಸಂರಕ್ಷಣೆ ಅಭಿವೃದ್ಧಿ | 200.00 | ಆಯುಕ್ತರು (ಪು.ಸಂ.ಪ ಮತ್ತು ಪ ಇಲಾಖೆ) ಮೈಸೂರು | 10.00 | ಕಾಮಗಾರಿ ಪ್ರಗತಿಯಲ್ಲಿದೆ. |
| 27 | ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಭಾತಂಬ್ರ ಕೋಟೆ ಸಂರಕ್ಷಣೆ ಅಭಿವೃದ್ಧಿ | 200.00 | ಆಯುಕ್ತರು (ಪು.ಸಂ. ಮತ್ತು ಪ ಇಲಾಖೆ) ಮೈಸೂರು | 10.00 | ಕಾಮಗಾರಿ ಪ್ರಗತಿಯಲ್ಲಿದೆ. |

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 1 | 2 | 3 | 4 | 5 | 6 |
| 28 | ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಕೋಣಮೇಳಕುಂದಾ ಗ್ರಾಮದ ಹೊರವಲಯದಲ್ಲಿರುವ ಮಡ್ಡಿಫೀರ್ ದರ್ಗಾ ಹಾಗೂ ಸಂಗಮೇಶ್ವರ ದೇವಾಲಯದ ಬಳಿ ಮೂಲಭೂತ ಸೌಲಭ್ಯ ಕಲ್ಪಿಸುವ ಬಗ್ಗೆ | 25.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 10.00 | ಕಾಮಗಾರಿ ಪ್ರಗತಿಯಲ್ಲಿದೆ. |
| 29 | ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಮೆಹಕರದ ಶ್ರೀ ಹಿರೇಮಠದ ಬಳಿ ಯಾತ್ರಿನಿವಾಸ ನಿರ್ಮಾಣ. | 25.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 10.00 | ಕಾಮಗಾರಿ ಪ್ರಗತಿಯಲ್ಲಿದೆ. |
| 30 | ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಡೊಂಗಾಪುರದ ಶ್ರೀ ಹಿರೇಮಠದ ಬಳಿ ಯಾತ್ರಿನಿವಾಸ ನಿರ್ಮಾಣ. | 25.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 10.00 | ಕಾಮಗಾರಿ ಪೂರ್ಣಗೊಂಡಿದೆ. |
| 31 | ಬೀದರ್ ಜಿಲ್ಲೆಯ ಹಿರೇಮಠ ಸಂಸ್ಥಾನ ಭಾಲ್ಕಿ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ (2021-22) (ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಹಿರೇಮಠ ಸಂಸ್ಥಾನ ಭಾಲ್ಕಿ ಆವರಣದಲ್ಲಿ ಯಾತ್ರಿನಿವಾಸದ ಹತ್ತಿರ ಮೂಲಭೂತ ಸೌಕರ್ಯ ಕಾಮಗಾರಿ **ಬದಲಾಗಿ)** | 100.00 | ಕೆ.ಆರ್.ಐ.ಡಿ.ಎಲ್ ಬೆಂಗಳೂರು | 33.00 | ಕಾಮಗಾರಿ ಪ್ರಗತಿಯಲ್ಲಿದೆ. |
| | **ಔರಾದ್ ತಾಲ್ಲೂಕು** | | | | |
| 32 | ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕಮಲಾನಗರ ಮುಧೋಳ (ಬಿ) ಗ್ರಾಮದಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದ ಬಳಿ ಕುಡಿಯುವ ನೀರು ಶೌಚಾಲಯ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯ ಅಭಿವೃದ್ಧಿ | 15.00 | ನಿರ್ಮಿತಿ ಕೇಂದ್ರ ಬೀದರ್ | 10.00 | ಕಾಮಗಾರಿ ಪೂರ್ಣಗೊಂಡಿದೆ. |
| | **ಒಟ್ಟು** | **3043.46** | | **1565.56** | |